ಆಳಂದ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾದ ಹಾನಿಯ ಬಗ್ಗೆ

೩೭೫(೭೪೦) ಶ್ರೀ ಶರಣಬಸಪ್ಪ ಪಾಲಿ ಪಾಟೀಲ್(ಆಳಂದ್).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಕಳೆದ ವರ್ಷ ಅತಿವೃಷ್ಟಿಯಿಂದ ಆಳಂದ್ ತಾಲ್ಲೂಕಿನಲ್ಲಿ ಬಿದ್ದುಹೋದ ಮನೆಗಳೆಷ್ಟು?

ಆ) ಆ ಪೈಕಿ ಎಷ್ಟು ಮಂದಿಗೆ ಹಾಗೂ ಪ್ರತಿಯೊಬ್ಬರಿಗೂ ಎಷು ಎಷ್ಟು ಹಣವನ್ನು ಪರಿಹಾರವಾಗಿ ನೀಡಲಾಗಿದೆ,

ಇ) ಇನ್ನು ಪರಿಹಾರ ನೀಡಿರುವುದಕ್ಕೆ ಕಾರಣಗಳೇನು ?

ಈ) ನೀಡಿರುವ ಪರಿಹಾರ ಧನ ಮನೆ ಕಳೆದು ಕೊಂಡವರಿಗೆ ತಲುಪಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೨೯೭೮ ಮನೆಗಳು.

ಆ) ರೂ. ೧೫೦–೦೦ ರಿಂದ ೨೦೦-೦೦ ರೂ.ಗಳವರೆಗೆ ಒಟ್ಟು ೧,೬೯೪ ಜನರಿಗೆ ಪರಿಹಾರ ನೀಡಲಾಗಿದೆ.

ಇ) ಕೇಂದ್ರವು ನೀಡಿದ ೧೫.೩೭ ಕೋಟಿ ರೂ. (೬.೦೦ ಕೋಟಿ ವಾರ್ಷಿಕ ಹಣವೂ ಸೇರಿ) ಗಳನ್ನು ಜಿಲ್ಲಾವಾರು ಹಂಚಲಾಗಿದ್ದು ಈ ಜಿಲ್ಲೆಗೆ ನಗದು ಪರಿಹಾರಕ್ಕೆ ೩.೪೦ ಲಕ್ಷ ರೂ. ಹಾಗೂ ಮನೆ ದುರಸ್ತಿ ಮತ್ತು ಪುನರ್ ನಿರ್ಮಾಣಕ್ಕೆ ೧೩.೦೦ ಲಕ್ಷ ರೂ.ಗಳನ್ನು ನೀಡಿದೆ. ಹೆಚ್ಚಿನ ಹಣಕ್ಕೆ ಬೇಡಿಕೆಯಿದ್ದು ಈ ಪರಿಹಾರ ಧನ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಹೌದು.

ಮಹಾವೀರ ವರದಿಯ ಬಗ್ಗೆ

೩೭೬(೭೪೦) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಪೋಲೀಸ್ ಇಲಾಖೆಯನ್ನು ಪುನರ್ ವ್ಯವಸ್ಥೆಗೊಳಿಸುವ ಬಗ್ಗೆ ಮಾಡಿರುವ ಮಹಾವೀರ ವರದಿಯನ್ನು ಅನುಷ್ಠಾನಕ್ಕೆ ತರಲಾಗಿದೆಯೇ ?

ಆ) ವರದಿಯ ಮೇರೆಗೆ ಜನ ಸಂಖ್ಯೆಗನುಗುಣವಾಗಿ ಪೋಲೀಸ್ ಖಬ್ಬಂದಿಯನ್ನು ನೇಮಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಇಂತಹ ವರದಿ ಯಾವುದೂ ಅಸ್ತಿತ್ವದಲ್ಲಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ,

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ

೩೭೭(೭೫೩) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಬಗ್ಗೆ ಯಾವ ಯಾವ ಶಾಸನ ಸಭಾ ಸದಸ್ಯರಿಂದ ಮನವಿಗಳು ಬಂದಿವೆ ?